# ಬ್ಯಾಡ್ಮಿಂಟನ್ ಚಿನ್ನ ಕಶ್ಯಪ್

**ಪರುಪಳ್ಳಿ ಕಶ್ಯಪ್‌ಗೆ 18ನೇ ವಯಸ್ಸಿನಲ್ಲಿ ಅಸ್ತಮಾ ಸಮಸ್ಯೆ ಕಾಡಿತು. ಆದರೂ, ಆತ ಛಲ ಬಿಡದೇ ದಿಟ್ಟ ಹೋರಾಟ ತೋರಿ ಈಗ 'ಬಂಗಾರ'ದ ಹುಡುಗ ಎನಿಸಿಕೊಂಡಿದ್ದಾರೆ.**

★ಪ್ರಮೋದ್ ಜಿ.ಕೆ.

**ಅದು ಅಸ್ತಮಾ...**

ಮಗ ಪದೇ ಪದೇ ಅನಾರೋಗ್ಯಕ್ಕೆ ಒಳಗಾಗುತ್ತಿದ್ದ ಕಾರಣ ತಂದೆ ಉದಯ್ ಶಂಕರ್ ವೈದ್ಯರನ್ನು ಸಂಪರ್ಕಿಸಿದ್ದರು. ಅದಕ್ಕೆ ವೈದ್ಯರು ನಿಮ್ಮ ಮಗನಿಗೆ ಅಸ್ತಮಾ ಸಮಸ್ಯೆ ಇದೆ. ದೈಹಿಕವಾಗಿ ಕಷ್ಟವೆನಿಸುವ ಕೆಲಸವನ್ನು ಅವನಿಂದ ಮಾಡಿಸಬೇಡಿ. ಆರೋಗ್ಯದ ಬಗ್ಗೆ ಸಾಕಷ್ಟು ನಿಗಾ ವಹಿಸಿ ಎನ್ನುವ ಎಚ್ಚರಿಕೆ ನೀಡಿದ್ದರು.

ಮಗ ಬ್ಯಾಡ್ಮಿಂಟನ್ ರಂಗದಲ್ಲಿ ದೊಡ್ಡ ಸಾಧನೆ ಮಾಡಬೇಕು ಎನ್ನುವ ಆಸೆ ಹೊತ್ತಿದ್ದ ಉದಯ್ ಶಂಕರ್‌ಗೆ ವೈದ್ಯರ ಮಾತು ಕೇಳಿ ಆಘಾತವಾಗಿತ್ತು.

ಕೆಲ ದಿನಗಳಲ್ಲಿ ಈ ವಿಷಯ ಮಗನಿಗೂ ಗೊತ್ತಾಗಿ ಹೋಯಿತು. ಆದರೆ, ಆತ ಎದೆಗುಂದಲಿಲ್ಲ. ಅಪ್ಪ ಮತ್ತು ಅಮ್ಮ ಸುಭದ್ರಾ ಅವರ ಸ್ಫೂರ್ತಿಯ ಮಾತುಗಳಿಂದ ಎಲ್ಲರೂ ಭೇಷ್ ಎನ್ನುವಂತ ಸಾಧನೆ ಮಾಡಿದ. ಆತ ಪರುಪಳ್ಳಿ ಕಶ್ಯಪ್.

ಗ್ಲಾಸ್ಗೊದಲ್ಲಿ ನಡೆದ 20ನೇ ಕಾಮನ್‌ವೆಲ್ತ್ ಕ್ರೀಡಾಕೂಟದ ಪುರುಷರ ವಿಭಾಗದ ಸಿಂಗಲ್ಸ್‌ನಲ್ಲಿ 27 ವರ್ಷದ ಕಶ್ಯಪ್ ಚಿನ್ನದ ಪದಕ ಜಯಿಸಿದ್ದಾರೆ. ಈ ಕೂಟದಲ್ಲಿ 32 ವರ್ಷಗಳ ನಂತರ ಭಾರತಕ್ಕೆ ಬಂದ ಮೊದಲ ಬಂಗಾರದ ಪದಕವಿದು. ಇದಕ್ಕೂ ಮೊದಲು ಪ್ರಕಾಶ್ ಪಡುಕೋಣೆ ಮತ್ತು ಸೈಯದ್ ಮೋದಿ ಈ ಸಾಧನೆ ಮಾಡಿದ್ದರು.

ಅಸ್ತಮಾ ಸಮಸ್ಯೆ ಎದುರಾದಾಗ ಕಶ್ಯಪ್‌ಗೆ 18 ವರ್ಷ. ಹೈದರಾಬಾದ್‌ನ ಈ ಆಟಗಾರನಿಗೆ ಇದೊಂದು ಸಮಸ್ಯೆ ಎನ್ನಿಸಲೇ ಇಲ್ಲ. ಏಕೆಂದರೆ, 11ನೇ ವರ್ಷದಲ್ಲಿಯೇ ರ್‍ಯಾಕೆಟ್ ಹಿಡಿದು ಬ್ಯಾಡ್ಮಿಂಟನ್‌ನಲ್ಲಿ ದೊಡ್ಡ ಸಾಧನೆಯ ಕನಸು ಕಂಡಿದ್ದರು. ತಮಗೆ ಹೀಗೊಂದು ಸಮಸ್ಯೆ ಇದೆ ಎಂದು ಗೊತ್ತಾಗುವ ವೇಳೆಗಾಗಲೇ ಜೂನಿಯರ್ ಮಟ್ಟದ ಹಲವು ಟೂರ್ನಿಗಳಲ್ಲಿ ಪ್ರಶಸ್ತಿ ಜಯಿಸಿದ್ದರು.

ಮಗ ಬ್ಯಾಡ್ಮಿಂಟನ್ ಆಟಗಾರ ಆಗಬೇಕೆನ್ನುವುದು ಪಾಲಕರ ಕನಸಾಗಿತ್ತು. ಅವರ ಆಸೆ ಈಡೇರಿಸುವುದೇ ಮಗನ ಬದುಕಾಗಿ ಹೋಯಿತು. ಹೈದರಾಬಾದ್‌ನ ಎಸ್.ಎಂ. ಆರೀಫ್ ಬಳಿ ಮೊದಲು ತರಬೇತಿ ಆರಂಭಿಸಿದ ಕಶ್ಯಪ್ ನಂತರ ಪ್ರಕಾಶ್ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿ ಸೇರಿಕೊಂಡರು. ಇದು ಅವರ ಬದುಕಿಗೆ ಸಿಕ್ಕ ದೊಡ್ಡ ತಿರುವು. ನೌಕರಿ ನಿಮಿತ್ಯವಾಗಿ ತಂದೆ ಬೇರೆ ಬೇರೆ ಊರುಗಳಿಗೆ ಅಲೆಯುತ್ತಿದ್ದರು. ಅಪ್ಪನ ಜೊತೆಗೆ ಮಗನ ಪಯಣ. ಹೀಗಾಗಿ ಬೆಂಗಳೂರು ಮತ್ತು ಹೈದರಾಬಾದ್‌ನಲ್ಲಿ ಕಶ್ಯಪ್‌ಗೆ ತರಬೇತಿ ಪಡೆಯಲು ಅವಕಾಶ ಸಿಕ್ಕಿತು.



ಪುಲ್ಲೇಲ ಗೋಪಿಚಂದ್ ಬಳಿ ತರಬೇತಿ ಪಡೆಯಲು ಆರಂಭಿಸಿದ ನಂತರವಂತೂ ಅವರಿಗೆ ಸಾಕಷ್ಟು ಪ್ರಶಸ್ತಿಗಳು ಒಲಿದು ಬಂದವು. ಒಂಬತ್ತು ವರ್ಷಗಳ ಹಿಂದೆ ಮೊದಲ ಅಂತರರಾಷ್ಟ್ರೀಯ ಟೂರ್ನಿಯಲ್ಲಿ ಆಡಿದ್ದ ಕಶ್ಯಪ್ ಬೇಗನೆ ಹೆಸರು ಹಾಗೂ ಖ್ಯಾತಿ ಗಳಿಸಿದರು. ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನಲ್ಲಿ ಉದ್ಯೋಗಿಯಾಗಿರುವ ಅವರು ಇಂಡಿಯನ್ ಬ್ಯಾಡ್ಮಿಂಟನ್ ಲೀಗ್‌ನಲ್ಲಿ ಬೆಂಗಾ ಬೀಟ್ಸ್ ತಂಡದಲ್ಲಿದ್ದಾರೆ. ಫುಟ್‌ಬಾಲ್ ಹಾಗು ಟೆನಿಸ್ ಕಶ್ಯಪ್‌ರ ನೆಚ್ಚಿನ ಕ್ರೀಡೆಗಳು. ರೋಜರ್ ಫೆಡರರ್ ಮತ್ತು ಲಯೋನೆಲ್ ಮೆಸ್ಸಿ ಇವರ ಮೆಚ್ಚಿನ ಆಟಗಾರರು. ಗೋವಾವನ್ನು ತುಂಬಾ ಪ್ರೀತಿಸುವ ಕಶ್ಯಪ್ ವರ್ಷಕ್ಕೆ ಒಂದು ಸಲವಾದರೂ ಅಲ್ಲಿ ಹೋಗಿ ಬರುತ್ತಾರೆ. ಮನೆಯಲ್ಲಿಯೇ ತಯಾರಿಸಿದ ಆಹಾರವನ್ನು ಹೆಚ್ಚು ಇಷ್ಟಪಡುವ ಕಶ್ಯಪ್‌ಗೆ ಅಮ್ಮ ಮಾಡಿದ ಪಪ್ಪು (ಬೇಳೆ ಸಾರು) ಎಂದರೆ ತುಂಬಾ ಪ್ರೀತಿ. ಅದು ಬಿಟ್ಟರೆ ಹೈದರಾಬಾದ್ ಬಿರಿಯಾನಿ ಅಚ್ಚುಮೆಚ್ಚು.

'ಮೊದಲಿನಿಂದಲೂ ಬ್ಯಾಡ್ಮಿಂಟನ್‌ನಲ್ಲಿ ಆಸಕ್ತಿಯಿತ್ತು. ಆದರೆ, ಅದಕ್ಕಿಂತಲೂ ಹೆಚ್ಚಾಗಿ ಎಂಜಿನಿಯರಿಂಗ್ ಪದವೀಧರ ಆಗಬೇಕು ಎನ್ನುವ ದೊಡ್ಡ ಗುರಿಯಿತ್ತು...' ಎಂದು ಕಶ್ಯಪ್ 'ಸುಧಾ'ಕ್ಕೆ ನೀಡಿದ ಸಂದರ್ಶನದಲ್ಲಿ ತಮ್ಮ ಬಾಲ್ಯದ ಕನಸನ್ನು ಹಂಚಿಕೊಂಡಿದ್ದಾರೆ.

* ಕಾಮನ್‌ವೆಲ್ತ್ ಕೂಟದಲ್ಲಿ ಪದಕ ಗೆಲ್ಲಲು ಸ್ಫೂರ್ತಿ ಯಾರು?

ನನ್ನೆಲ್ಲಾ ಸಾಧನೆಗೆ ಸ್ಫೂರ್ತಿ ಅಮ್ಮ. ಏಕೆಂದರೆ, ನಾನು ಎಂಜಿನಿಯರಿಂಗ್ ಓದಿ ದೊಡ್ಡ ಸಾಧನೆ ಮಾಡಬೇಕು ಎನ್ನುವುದು ಅಮ್ಮನ ಕನಸಾಗಿತ್ತು. ಈ ಆಸೆ ನನಗೂ ಇತ್ತು. ಆದರೆ, ಬ್ಯಾಡ್ಮಿಂಟನ್‌ನಲ್ಲಿ ಇಷ್ಟೊಂದು ಸಾಧನೆ ಮಾಡುತ್ತೇನೆ ಎನ್ನುವ ನಿರೀಕ್ಷೆಯಂತೂ ಖಂಡಿತಾ ಇರಲಿಲ್ಲ. ಯಾವುದೇ ಟೂರ್ನಿಯಾಗಲಿ, ಸೋಲಲಿ ಅಥವಾ ಗೆಲ್ಲಲಿ ಅಮ್ಮ ಬೆನ್ನು ತಟ್ಟಿ ಪ್ರೋತ್ಸಾಹಿಸುತ್ತಾರೆ. ನೀನು ಎಂಜಿನಿಯರ್ ಆಗಿದ್ದರೆ ಮನೆಗೆ ಮಾತ್ರ ಕೀರ್ತಿ ತರುತ್ತಿದ್ದೆ. ಬ್ಯಾಡ್ಮಿಂಟನ್ ಆಟಗಾರನಾಗಿದ್ದರಿಂದಲೇ ಈಡೀ ದೇಶವೇ ಹೆಮ್ಮೆ ಪಡುವಂಥ ಸಾಧನೆ ಮಾಡಲು ಸಾಧ್ಯವಾಗಿದೆ ಎಂದು ಅಮ್ಮ ಆಗಾಗ್ಗೆ ಹೇಳುವಾಗ ನನಗೆ ಮತ್ತಷ್ಟು ಖುಷಿಯಾಗುತ್ತದೆ ಎನ್ನುತ್ತಾರೆ.

* ಮುಂದಿನ ಗುರಿ?

ವಿಶ್ವ ಚಾಂಪಿಯನ್‌ಷಿಪ್ ಬ್ಯಾಡ್ಮಿಂಟನ್ ಆಟಗಾರರಿಗೆ ಮತ್ತೊಂದು ಒಲಿಂಪಿಕ್ಸ್ ಇದ್ದಂತೆ. ಆದ್ದರಿಂದ ಅಲ್ಲಿ ಚಾಂಪಿಯನ್ ಎನಿಸಿಕೊಳ್ಳಬೇಕು ಎನ್ನುವ ಆಸೆಯಿದೆ.

ಪರುಪಳ್ಳಿ ಕಶ್ಯಪ್‌ಗೆ 18ನೇ ವಯಸ್ಸಿನಲ್ಲಿ ಅಸ್ತಮಾ ಸಮಸ್ಯೆ ಕಾಡಿತು. ಆದರೂ, ಆತ ಛಲ ಬಿಡದೇ ದಿಟ್ಟ ಹೋರಾಟ ತೋರಿ ಈಗ 'ಬಂಗಾರ'ದ ಹುಡುಗ ಎನಿಸಿಕೊಂಡಿದ್ದಾರೆ.